TALUK LEGAL SERVICES COMMITTE , BANTWAL

No.TLSC/BNT/RTI-4(1)(B)/2024-25

Ofiice of the
Taluk Legal Services Committee,
Bantwal Court Complex,
Bantwal, dated 05.06.2024

## NOTIFICATION

In exercise of the powers conferred under Section 4(b) 5(1) and 19(1) of the Right to Information Act, 2005 (Central Act No.22 of 2005), the detailed information relating to the Taluk Legal Services Committee is published as hereunder for the information of the general public and the Hon'ble Chairman of Legal Services Committee jhas been pleased to designated the officers mentioned in column No. (xvi) of this Notification as Public Information Officer and Appellant Authority respectively to come into effect immediately.

| | | |
|---|---|---|
| | I) Particulars oforganization, functions and duties. | Organization: **Taluk Legal Services Committee, Bantwal.**<br><br>**<u>Functions and duties:</u>**<br><br>1. To create legal awareness in the people.<br><br>2. To offer free legal aid and advice for eligible persons.<br><br>3. To provide justice to the affected persons quickly and in low cost by settling case (litigations) through Janatha Nyayalayas (Lok Adalats).<br><br>4. Services of Legal Aid Lawyers to provide legal aid and advice.<br><br>5. Para Legal Volunteers to assist legal aid lawyers and to help the litigants in filing up forms from legal aid etc. |
| | ii) Powers and duties of its | Details are at Annexure - I. |

| | | |
|---|---|---|
| | Officers and employees | |
| | iii)procedure followed in the decision making process, including channels of supervision and accountability. | Caseworker will open a file on receipt of proposal and process the proposal in the existing file. He will scrutinize the same and place it before the Member Secretary will review the proposal in light of existing provisions/ Rules and will decide the course of action. If necessary, he will submit the file before Hon'ble Chairman, TLSC for necessary orders. |
| | iv) Norms set by it for the discharge of its functions. | Depending on urgency, proposal will be finalized on priority. |
| | v) Rules, regulations, instructions, manuals and records held by it or under its control. | Details are as at Annexure-Il. |
| | vi) A statement of categories of documents that are held by the authority under its control | Files and relevant Registers are maintained. |
| | Vii) Particulars of any arrangement that exists for consultation with or representation by the members of the public in relation to the formulation of its policy or implementation thereof Member Secretary will provide information. | Member Secretary will provide information. |
| | Viii) A statement of the boards, councils, committees and other bodies consisting of' two or more persons constituted as its part or for the purpose of its advice and as to whether meeting of those boards, council, committees and other bodies are open to the public or the minutes of such meetings are accessible for | Meetings of the Committee are not open to the public and the minutes of such meetings are not accessible to public. |

| | | |
|---|---|---|
| | public, | |
| | ix) A Directory of its officers. | Directory of Officer maintained. |
| | x) Monthly remuneration received by each of the officers and employees, including the system of compensation as provided in its regulations. | As per the scale of pay of their post as mentioned in Schedule I of Karnataka State Legal Services Authorities Rules. |
| | xi)Budget allotted to each of its agency indicating the particulars of all plans, proposed expenditures and reports on disbursements made. | Allotment of the budget to the Committee is under plan and non-plan scheme of the Karnataka State Legal Services Authority. |
| | Xii) Manner of execution of subsidy programmes, including the amounts allocated and the details allocated and the details of beneficiaries of such programmes. | As per the Scheme of the Act and Rules framed there under. |
| | xiii) Details in respect of the information, available to or held by it, reduced in electronic form. | Available in the website https://districts.ecourts.gov.in/mangaluru |
| | xiv) Particulars of facilities available to citizens for obtaining information including the working hours of library or reading room if maintained for public use. | Public may approach the office of during Working hours, on all working days. |
| | xv) The names, designations and other particulars of the Public Information Officer. | Member Secretary,<br>TLSC Bantwal,<br>Bantwal Court Complex<br>Telephone No :- Nil |
| A | xvi) (a) Appellate Authority under sec. 19(1) of Right to Information Act. | Member Secretary,<br>Karnataka State Legal Services Authority. Tel. No. 080-22111730. |
| b) | Member Secretary of<br>Taluk Legal Services Committee U/s 5(2) of Right to Information Act. | Member Secretary,<br>Taluk Legal Services Committee Bantwal – as State Assistant information officer.<br>Tel. No. - Nil |

| | | |
|---|---|---|
| (c) | Xvii) Such other information as may be prescribed | -Nil- |

Individual files cannot be uploaded since they are concerned with the personal matters of the litigants.

By the order of the Hon'ble Chairman

Sd/-
Member Secretary
Taluk Legal Services Committee
Bantwal

# ANNEXURE-I

## THE POWERS AND DUTIES OF THE OFFICERS AND EMPLOYEES OF THE TALUK LEGAL SERVICES COMMITTEE ,BANTWAL .

| | |
|---|---|
| Dalayath | To keep the office neat and tidy.<br>To deliver the files/tappals to other section. |
| (Assistant/Junior Assistant / Admin Assistant) | To attend to the job of case working as per the duties cast on them, i.e., Lok Adalath, Providing Legal-Aid, Conducting Legal Literacy Programmes, Victim Compensation and Monitoring Committees, etc.,<br>In charge of receipts of tappals /files by the Hon'ble Chairman and Member Secretary and typing work entrusted by the Member Secretary. |
| Member Secretary | Heads of the organization Acts, in their capacity as Head of the Department upon the advice / directions of the Hon'ble Chairman, Taluk Legal Services Committee. |

ANNEXURE-II

**The rules, regulations, instructions, manuals and records held by it or under its control or used by its employees for' discharging its functions:**

- Acts:

1. The Legal Service Authorities Act 1987 (As amended by the Legal Services Authorities (Amendment) Act.2002)
2. The Karnataka State Legal Services Authorities Rules 1996
3. The Karnataka State Legal Services Authority Regulations 1997

- **Rules:**

(1) The Karnataka Civil Service Rules,
(2) The Karnataka Financial Code, 1958
(3) The Karnataka Civil Services (Medical Attendance) Rules, 1963,
(4) The Karnataka Civil Services (Performance Report) Rules, 1994.

- **Instructions, Manuals and others.**

1. The Criminal Procedure Code.
2. The Civil Procedure Code.

ತಾಲೂಕು ಕಾನೂನು ಸೇವೆಗಳ ಸಮಿತಿ
ನ್ಯಾಯಾಲಯಗಳ ಸಂಕೀರ್ಣ,
ಬಂಟ್ವಾಳ - 574 219

ಮಾಹಿತಿ ಹಕ್ಕು ಅಧಿನಿಯಮ **, 2005**ರ ಪ್ರಕರಣ **4** ರಡಿಯಲ್ಲಿ ಮಾಹಿತಿ ವಿವರ

| | | |
|---|---|---|
| ಕಛೇರಿ ಹೆಸರು ಮತ್ತು ವಿಳಾಸ | : | ತಾಲೂಕು ಕಾನೂನು ಸೇವೆಗಳ ಸಮಿತಿ<br>ನ್ಯಾಯಾಲಯಗಳ ಸಂಕೀರ್ಣ,<br>ಬಂಟ್ವಾಳ ತಾಲೂಕು -574 219 |
| ಕಛೇರಿ ಈ **-ಮೇಲ್ ವಿವರ** | : | pcj.jr.bantwal.office@gmail.com |

**Website: https://districts.ecourts.gov.in/mangaluru**

ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರದ ಧ್ಯೇಯೋದ್ದೇಶಗಳು

- ಸಾರ್ವಜನಿಕರಲ್ಲಿ ಕಾನೂನಿನ ಬಗ್ಗೆ ಅರಿವು ಉಂಟು ಮಾಡುವುದು.
  (ಅರಿವು ನೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರೊಂದಿಗೆ )
- ಉಚಿತ ಕಾನೂನು ನೆರವು ಮತ್ತು ಸಲಹೆಯನ್ನು ನೀಡುವುದು.
- ಜನತಾ ನ್ಯಾಯಾಲಯದ (ಲೋಕ ಅದಾಲತ್)ಗಳ ಮೂಲಕ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಜನರಿಗೆ ತ್ವರಿತವಾದ ಮತ್ತು ಖರ್ಚಿನಲ್ಲಿ ನ್ಯಾಯ ದೊರಕಿಸಿಕೊಡುವುದು.

ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರದಿಂದ ಉಚಿತವಾ+ಗಿ ದೊರಕುವ ಸೇವೆಗಳು **:**

- ಉಚಿತ ಕಾನೂನು ಸೇವೆಗಳು(ನಿಶ್ಚಿತ ವರ್ಗದವರಿಗೆ)ಹಾಗೂ ವಾರ್ಷಿಕ ಆದಾಯ ರೂ. 300000.00ಗಳಿಗಿಂತ ಕಡಿಮೆ ಹೊಂದಿರುವವರಿಗೆ .
- ಉಚಿತ ಕಾನೂನು ಸಲಹೆ.
- ರಾಜೀ ಸಂಧಾನ.
- ಜನತಾ ನ್ಯಾಯಾಲಯ ಮೂಲಕ ನ್ಯಾಯಾಲಯಗಳಲ್ಲಿರುವ ಪ್ರಕರಣಗಳ ಇತ್ಯರ್ಥ.
- ಮಧ್ಯಸ್ಥಿಕೆ ಕೇಂದ್ರಗಳ ಮೂಲಕ ಸಂಧಾನ ವ್ಯವಸ್ಥೆ .
- ವ್ಯಾಜ್ಯ ಪೂರ್ವ ಸಮಸ್ಯೆಗಳ ಪರಿಹಾರ.
- ಕಾನೂನು ಸಾಕ್ಷರತೆ /ಕಾನೂನು ಅರಿವು ನೆರವು.

ಉಚಿತ ಕಾನೂನು ಸಲಹೆ ಮತ್ತು ಸೇವೆಗಳು /ನೆರವನ್ನು ಪಡೆಯಲು ಅರ್ಹರು:

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರು.
- ಮಹಿಳೆಯರು ಮತ್ತು ಮಕ್ಕಳು.

- ಕಾರ್ಖಾನೆಯ ಕಾರ್ಮಿಕರು.
- ಗುಂಪು ಘರ್ಷಣೆ , ಗಲಭೆ, ಪ್ರವಾಹ, ಕ್ಷಾಮ, ಭೂಕಂಪ ಕೈಗಾರಿಕಾ ವಿನಾಶ ಮಂತಾದವುಗಳಿಗೆ ತುತ್ತಾದವರು.
- ಮತೀಯ ಗಲಭೆಯ ಕಾರಣದಿಂದ ದೌರ್ಜನ್ಯ ಹೊಂದಿದವರು.
- ರಕ್ಷಣಾ ಗೃಹ, ಮನೋರೋಗಿಗಳ ಆಸ್ಪತ್ರೆ ಮುಂತಾದವುಗಳಲ್ಲಿ ಅಭಿರಕ್ಷೆಯಲ್ಲಿರುವವರು.
- ದೈಹಿಕ ವ್ಯಾಪಾರ ಅಥವಾ ಜೀತಕ್ಕೊಳಗಾದವರು
- ವಾರ್ಷಿಕ ಆದಾಯ ಮೂರು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರುವ ಎಲ್ಲಾ ವರ್ಗದ ಜನರು ಉಚಿತ ಕಾನೂನು ಸೇವೆಯನ್ನು ಪಡೆಯಲು ಅರ್ಹರಿರುತ್ತಾರೆ.
- ಸರ್ವೋಚ್ಚ ನ್ಯಾಯಾಲಯದಲ್ಲಿ ಕಾನೂನು ಸೇವೆಯನ್ನು ಪಡೆಯಲು ವಾರ್ಷಿಕ ಆದಾಯ 5 ಲಕ್ಷಗಳಿಗಿಂತ ಕಡಿಮೆ ಇರುವ ಎಲ್ಲಾ ವರ್ಗದ ಜನರು ಉಚಿತ ಕಾನೂನು ಸೇವೆ ಪಡೆಯಲು ಅರ್ಹರಿರುತ್ತಾರೆ.
- ಉಚಿತ ಕಾನೂನು ನೆರವು ಅಂದರೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ವಕೀಲರ ಫೀಸು ಮತ್ತು ನ್ಯಾಯಾಲಯದ ಶುಲ್ಕ ಹಾಗೂ ಇತರೇ ವೆಚ್ಚಗಳನ್ನು ಸಂಪೂರ್ಣವಾಗಿ ತಾಲೂಕು ಸಮಿತಿಯಿಂದಲೇ ಭರಿಸಲಾಗುವುದು.
- ವಿಚಾರಣಾಧೀನ ಕೈದಿಗಳಿಗೆ ಉಚಿತ ಕಾನೂನು ಸೇವೆಗಳನ್ನು ನೀಡಲಾಗುವುದು.

<u>ಉಚಿತ ಕಾನೂನು ಸಲಹಾ ಕೇಂದ್ರಗಳು ಃ</u>

1. ನ್ಯಾಯಾಲಯಗಳ ಸಂಕೀರ್ಣ, ಬಂಟ್ವಾಳ
2. ಬಂಟ್ವಾಳ ನಗರ ಪೋಲೀಸ್ ಠಾಣೆ
3. ಸಿ.ಡಿ.ಪಿ.ಒ. ಕಛೇರಿ, ಬಂಟ್ವಾಳ
4. ಸಿ.ಡಿ.ಪಿ.ಒ. ಕಛೇರಿ ವಿಟ್ಲ, ಗ್ರಾಮೀಣ ವಿಭಾಗ,

<u>ಜನತಾ ನ್ಯಾಯಾಲಯ (ಲೋಕ ಅದಾಲತ್ )ಗಳು :</u>

ಪ್ರಕರಣವೊಂದರ ಉಭಯ ಪಕ್ಷಗಳವರಲ್ಲಿ ರಾಜೀ ಸಂಧಾನ ಏರ್ಪಡಿಸುವ ಮೂಲಕ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಉದ್ದೇಶದಿಂದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ನ್ಯಾಯಾಲಯದ ಅಥವಾ ತಾಲೂಕು ಕಾನೂನು ಸೇವೆಗಳ ಸಮಿತಿ ರಚಿಸುವ ನ್ಯಾಯಾಲಯವೇ ಜನತಾ ನ್ಯಾಯಾಲಯ (ಲೋಕ ಅದಾಲತ್ ).

<u>ಜನತಾ ನ್ಯಾಯಾಲಯಗಳಲ್ಲಿ ಎಂತಹ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುತ್ತದೆ ?</u>

<u>ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುವ</u>

- ಮೋಟಾರು ವಾಹನ ಅಪಘಾತ ಸಂಬಂಧ ಪರಿಹಾರ ಪ್ರಕರಣಗಳು .
- ಭೂ ಸ್ವಾಧೀನ ಸಂಬಂಧ ಪ್ರಕರಣಗಳು, ನಗರಾಭಿವೃದ್ಧಿ ಪ್ರಾಧಿಕಾರ, ಮಹಾನಗರ ಪಾಲಿಕೆ, ಸ್ಥಳೀಯ ಸಂಸ್ಥೆಗಳ ಪರ ಮತ್ತು ವಿರುದ್ಧ ದಾಖಲಾದ ಪ್ರಕರಣಗಳು.
- ಬ್ಯಾಂಕುಗಳಿಗೆ ಸಂಬಂಧಿಸಿದ ಪ್ರಕರಣಗಳು.
- ವೈವಾಹಿಕ ಅಥವಾ ಜೀವನಾಂಶ ಪ್ರಕರಣಗಳು. ಕಾನೂನಿನ್ವಯ ರಾಜಿ ಆಗಬಹುದಾದ ಕ್ರಿಮಿನಲ್ ಪ್ರಕರಣಗಳು.
- ಕಾರ್ಮಿಕ ನಷ್ಟ ಪರಿಹಾರ ಪ್ರಕರಣಗಳು .
- ಗ್ರಾಹಕರ ವಿವಾದಗಳಿಗೆ ಸಂಬಂಧಿಸಿದ ಪ್ರಕರಣಗಳು.
- ರಾಜಿ ಆಗಬಹುದಾದ ಎಲ್ಲಾ ವಿಧದ ಪ್ರಕರಣಗಳನ್ನು ಜನತಾ ನ್ಯಾಯಾಲಯಗಳ ಮೂಲಕ ಇತ್ಯರ್ಥ ಪಡಿಸಿಕೊಳ್ಳಬಹುದು.

<u>ಜನತಾ ನ್ಯಾಯಾಲಯಗಳ ವೈಶಿಷ್ಟ್ಯ :</u>

- ವ್ಯಾಜ್ಯವನ್ನು ಜನತಾ ನ್ಯಾಯಾಲಯದ ಲೋಕ ಅದಾಲತ್ ಮೂಲಕ ಶೀಘ್ರವಾಗಿ

ಇತ್ಯರ್ಥಗೊಳಿಸಿಕೊಳ್ಳಬಹುದು.

- ಇಲ್ಲಿ ಯಾವುದೇ ಕೋರ್ಟ್ ಫೀ ನ್ಯಾಯಾಲಯ ಶುಲ್ಕ ಪಾವತಿಸುವಂತಿರುವುದಿಲ್ಲ.
- ಜನತಾ ನ್ಯಾಯಾಲಯದಲ್ಲಿ ನೀವು ವಕೀಲರ ಮುಖಾಂತರವೇ ಭಾಗವಹಿಸಬೇಕೆನ್ನುವ ನಿಯಮವೇನೂ ಇಲ್ಲ. ನೀವೇ ನೇರವಾಗಿ ಭಾಗವಹಿಸಬಹುದು.
- ನಿಮ್ಮ ಪ್ರಕರಣದಲ್ಲಿ ನಿಮಗೆ ಮಾರ್ಗದರ್ಶನ ನೀಡಿ ರಾಜೀ ಸಂಧಾನ ಏರ್ಪಡಿಸಲು ಜನತಾ ನ್ಯಾಯಾಲಯದಲ್ಲಿ ಕನಿಷ್ಟ ಇಬ್ಬರು ಸಂಧಾನಕಾರರಿದ್ದು ಅವರಲ್ಲಿ ಒಬ್ಬರು ನ್ಯಾಯಾಧೀಶರೇ ಆಗಿರುತ್ತಾರೆ.
- ಸಂಧಾನಕಾರರು ಸೂಚಿಸುವ ಪರಿಹಾರ ನಿಮಗೆ ತೃಪ್ತಿಯಾದಲ್ಲಿ ಮಾತ್ರ ನೀವು ರಾಜಿ ಮಾಡಿಕೊಳ್ಳಬಹುದು.

<u>ಮಧ್ಯಸ್ಥಿಕೆ ಕೇಂದ್ರ :</u>

- ಮಧ್ಯಸ್ಥಿಕೆಯ ವಿವಾದ ಹೊಂದಿರುವ ಪಕ್ಷಕಾರರು ವಿಚಾರಣೆ ಹೋಗದೆ ತಮ್ಮ ವಿವಾದವನ್ನು ಸೃಜನಾತ್ಮಕವಾಗಿ ಇತ್ಯರ್ಥಪಡಿಸಿಕೊಳ್ಳಲು ಸಹಾಯ ಮಾಡುವ ಒಂದು ಪ್ರಕ್ರಿಯೆಯಾಗಿದೆ. ವಿವಾದ ಇತ್ಯರ್ಥಕ್ಕೆ ಮಧ್ಯಸ್ಥಿಕೆಯು ಎಲ್ಲಾ ಪಕ್ಷಕಾರರು ಹಾಗೂ ಅವರ ವಕೀಲರು ಸಕ್ರಿಯವಾಗಿ ಪಾಲ್ಗೊಳ್ಳುವಂತಹ ಒಂದು ವಿಶಿಷ್ಟ ಅವಕಾಶವನ್ನು ಇದು ಕಲ್ಪಿಸುತ್ತದೆ. ಮಧ್ಯಸ್ಥಿಕೆಯಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರವು ಯಾವಾಗಲೂ ಪಕ್ಷಕಾರರದ್ದೇ ಆಗಿರುತ್ತದೆ. ಮಧ್ಯಸ್ಥಗಾರರು ವಿವಾದವೆತ್ತಿರುವ ಪಕ್ಷಕಾರರನ್ನು ವಿವಾದಕ್ಕೊಳಗಿರುವ ವಿಷಯವನ್ನು ಅರ್ಥ ಮಾಡಿಕೊಂಡು ಇತ್ಯರ್ಥಕ್ಕೆ ಇರುವ ಅಡ್ಡಿ ಆತಂಕಗಳನ್ನು ನಿವಾರಿಸಲು ಪ್ರಯತ್ನ ಮಾಡುತ್ತಾನೆ.
- ಮಧ್ಯಸ್ಥಿಕೆಯು ವಿವಾದ ಹೊಂದಿರುವ ಪಕ್ಷಕಾರರು ವಿಚಾರಣೆ ಹೋಗದೆ ತಮ್ಮ ವಿವಾದವನ್ನು ಸೃಜನಾತ್ಮಕವಾಗಿ ಇತ್ಯರ್ಥಪಡಿಸಿಕೊಳ್ಳಲು ಸಹಾಯ ಮಾಡುವ ಒಂದು ಪ್ರಕ್ರಿಯೆಯಾಗಿದೆ. ವಿವಾದ ಇತ್ಯರ್ಥಕ್ಕೆ ಮಧ್ಯಸ್ಥಿಕೆಯು ಎಲ್ಲಾ ಪಕ್ಷಕಾರರು ಹಾಗೂ ಅವರ ವಕೀಲರು ಸಕ್ರಿಯವಾಗಿ ಪಾಲ್ಗೊಳ್ಳುವಂತಹ ಒಂದು ವಿಶಿಷ್ಟ ಅವಕಾಶವನ್ನು ಇದು ಕಲ್ಪಿಸುತ್ತದೆ. ಮಧ್ಯಸ್ಥಿಕೆಯಲ್ಲಿ ನಿರ್ಧಾರ ಕೈಗೊಳ್ಳುವ ಅಧಿಕಾರವು ಯಾವಾಗಲೂ ಪಕ್ಷಕಾರರದ್ದೇ ಆಗಿರುತ್ತದೆ. ಮಧ್ಯಸ್ಥಗಾರರು ವಿವಾದವೆತ್ತಿರುವ ಪಕ್ಷಕಾರರನ್ನು ವಿವಾದಕ್ಕೊಳಗಿರುವ ವಿಷಯವನ್ನು ಅರ್ಥ ಮಾಡಿಕೊಂಡು ಇತ್ಯರ್ಥಕ್ಕೆ ಇರುವ ಅಡ್ಡಿ ಆತಂಕಗಳನ್ನು ನಿವಾರಿಸಲು ಪ್ರಯತ್ನ ಮಾಡುತ್ತಾನೆ.
- ಮಧ್ಯಸ್ಥಿಕೆಯು ಸ್ವಪ್ರೇರಿತವಾದದ್ದಾಗಿರುತ್ತದೆ. ಮಧ್ಯಸ್ಥಿಕೆಯು ಯಾವಾಗಲೂ ಪಾರದರ್ಶಕವಾಗಿರುತ್ತದೆ. ಮಧ್ಯಸ್ಥಿಕೆಯಲ್ಲಿ ಹಣ ಮತ್ತು ಸಮಯ ವ್ಯರ್ಥವಾಗುವುದಿಲ್ಲ. ಮಧ್ಯಸ್ಥಿಕೆಯಲ್ಲಿ ನಿಯಮ ಹಾಗೂ ಸಾಕ್ಷ್ಯಕ್ಕೆ ಬದಲಾಗಿ ಪಕ್ಷಗಾರ ಹಿತಾಸಕ್ತಿಗಳ ಬಗೆಗೆ ಮನಹರಿಸಲಾಗುವುದು. ಮಧ್ಯಸ್ಥಿಕೆಯು ಪಕ್ಷಗಾರರು ತಾವೇ ವಿವಾದವನ್ನು ಇತ್ಯರ್ಥಗೊಳಿಸಿಕೊಳ್ಳಲು ಶಕ್ತರಾಗುವಂತೆ ಮಾಡುತ್ತದೆ. ಪ್ರಕರಣದ ವ್ಯಾಜ್ಯ ಇತ್ಯರ್ಥ ಸಾಧ್ಯವಾಗದಿದ್ದಲ್ಲಿ ನ್ಯಾಯ ನಿರ್ಣಯಕ್ಕಾಗಿ ಅದನ್ನು ಮಧ್ಯಸ್ಥಿಕೆಗಾಗಿ ಕಳುಹಿಸಿದ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸಲಾಗುವುದು. ಪ್ರತಿ ಜಿಲ್ಲೆಯಲ್ಲಿ ಮಧ್ಯಸ್ಥಿಕೆ ಕೇಂದ್ರವನ್ನು ಸ್ಥಾಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯಾಲಯವನ್ನು ಸಂಪರ್ಕಿಸಬಹುದು.

<u>ರಾಜೀ ಸಂಧಾನ /ವ್ಯಾಜ್ಯ ಪೂರ್ವ ಪ್ರಕರಣ :</u>

ಸಾರ್ವಜನಿಕರು ದಿನ ನಿತ್ಯದ ಕಾನೂನು ಹಾಗೂ ಇತರೆ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಕಾರ್ಯಾಲಯಗಳಿಗೆ ಬೇಟಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅವರ ಸಮಸ್ಯೆಗಳನ್ನು ಪರಿಹರಿಸುವ ವ್ಯವಸ್ಥೆ ಮಾಡಲಾಗುವುದು.

<u>ಸ್ವಪ್ರೇರಿತ ಕಾನೂನು ಸಹಾಯಕ **(Para Legal Volunteers - PLV)**</u>

ಕಾನೂನು ಸಹಾಯಕರಾಗಿ ತರಬೇತಿ ಪಡೆದವರು ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಅರ್ಹ ನಾಗರೀಕರ ನಡುವೆ ಪರಿಣಾಮಕಾರಿ ಸಮನ್ವಯಕಾರರಾಗಿ ಕಾರ್ಯ ನಿರ್ವಹಿಸುತ್ತಾರೆ.

ಸ್ವಪ್ರೇರಿತ ಕಾನೂನ ಸಹಾಯಕರು ತಮ್ಮ ಸುತ್ತಮುತ್ತಲಿನ ಪರದೇಶದ ಶೋಷಿತ ಹಾಗೂ ದೌರ್ಜನ್ಯಕ್ಕೊಳಗಾದ ಜನರ ಸೇವೆ ಮಾಡಲು ಅರ್ಪಣಾ ಮನೋಭಾವ ಹೊಂದಿರುತ್ತಾರೆ. ಇವರು ಸರ್ಕಾರದ ವಿವಿಧ ಯೋಜನೆಗಳು, ಆದೇಶಗಳು, ಶಾಸನಗಳು, ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ, ಜನತಾ ನ್ಯಾಯಾಲಯಗಳು, ಪರ್ಯಾಯ ವಿವಾದ ಪರಿಹಾರ ವ್ಯವಸ್ಥೆ, ಉಚಿತ ಕಾನೂನು ಸಹಾಯ ಮತ್ತು ಸೇವೆಗಳ ಬಗೆಗೆ ಅರಿವನ್ನುಂಟು ಮಾಡುವ ಸೇವೆಯನ್ನು ಸಲ್ಲಿಸುವುದಲ್ಲದೇ ನಾಗರೀಕರ ಹಕ್ಕುಗಳು ಹಾಗೂ ಹೊಣೆಗಳ ಬಗೆಗೆ ಶಿಕ್ಷಣ ನೀಡುವುದು, ಸಮಸ್ಯೆಗಳ ಪರಿಹಾರ/ಸಲಹೆ ಕೋರಿ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸುವ ಬಗೆಗೆ ಜನರಲ್ಲಿ ಅರಿವು ಮೂಡಿಸುವುದು, ತಮ್ಮ ಕಾರ್ಯಕ್ಷೇತ್ರದಲ್ಲಿ ನಡೆಯುವ ಕಾನೂನು ಉಲ್ಲಂಘನೆಯ ಹಾಗೂ ಅನ್ಯಾಯದ ಕಾರ್ಯಗಳ ಬಗೆಗೆ ಪರಿಣಾಮಕಾರಿ ಪರಿಹಾರ ಜರುಗಿಸಲು ಸಾಧ್ಯವಾಗುವಂತೆ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ಕಾನೂನು ಸೇವೆಗಳ ಸಮಿತಿಗೆ ಶೀಘ್ರವಾಗಿ ವರದಿ ಮಾಡುವುದು, ಕಾನೂನು ಅರಿವು ಶಿಬಿರಗಳನ್ನು ಬೇರೆಯವರ ಸಹಯೋಗದೊಂದಿಗೆ ವ್ಯವಸ್ಥೆಗೊಳಿಸುವುದು, ಕಾನೂನು ಸೇವೆಗಳ ಬಗೆಗೆ ಅರಿವನ್ನುಂಟುಮಾಡುವುದು, ಮಧ್ಯಸ್ಥಿಕೆ, ರಾಜಿ ಸಂಧಾನ ಮತ್ತು ಜನತಾ ನ್ಯಾಯಾಲಯಗಳ ಮೂಲಕ ವಿವಾದಗಳನ್ನು ಪರಿಹರಿಸಿಕೊಳ್ಳುವುದರಲ್ಲಿ ಇರುವ ಪರಯೋಜನದ ಬಗೆಗೆ ನಾಗರೀಕರಿಗೆ ತಿಳುವಳಿಕೆ ನೀಡುವುದು, ಖಾಯಂ ಜನತಾ ನ್ಯಾಯಾಲಯಗಳಲ್ಲಿ ಸಾರ್ವಜನಿಕ ಉಪಯುಕ್ತ ಸೇವೆಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವುದು, ಇವೇ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸ್ವಪ್ರೇರಿತ ಕಾನೂನು ಸಹಾಯಕರು ಸಮಾಜದಲ್ಲಿ ಎಲ್ಲರಿಗೂ ನ್ಯಾಯಕ್ಕೆ ಪ್ರವೇಶಾವಕಾಶ ಸಿಗುವಲ್ಲಿ ಅರ್ಪಣಾ ಮನೋಭಾವದಿಂದ ಸದಾ ಶ್ರಮಿಸುತ್ತಿರುತ್ತಾರೆ.

## ಕಾನೂನು ಅರಿವು :

ಜನರಲ್ಲಿ ಕಾನೂನು ಅರಿವು ಮೂಡಿಸುವ ನಿಟ್ಟಿನಲ್ಲಿ ರಾಜ್ಯ ಪ್ರಾಧಿಕಾರದಿಂದ ಪ್ರಕಟಿಸಲಾದ ಅನೇಕ ಪುಸ್ತಕಗಳು ಕಿರು ಹೊತ್ತಿಗೆಗಳು ಹಾಗೂ ಕರಪತ್ರಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ಇಲ್ಲವೇ ಅತ್ಯಂತ ಕಡಿಮೆ ಬೆಲೆಯಲ್ಲಿ ವಿತರಿಸುವುದು. ಎಲ್ಲಾ ವರ್ಗದ ಜನರಿಗೆ ಕಾನೂನು ಕಾರ್ಯಾಗಾರ ಸರ್ಕಾರೇತರ ಸಂಸ್ಥೆಗಳು, ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಇತರೇ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಕಾನೂನು ಅರಿವು ನೆರವು ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಜೊತೆಗೆ ಪ್ರಾಧಿಕಾರದಿಂದ ಕಾನೂನು ಗೀತೆಗಳು ಧ್ವನಿಸುರುಳಿಗಳು, ನಾಟಕಗಳು ಹಾಗೂ ಟೆಲಿ ನಾಟಕಗಳ ಮೂಲಕ ಜನರಲ್ಲಿ ಕಾನೂನಿನ ಬಗೆಗೆ ಅರಿವನ್ನುಂಟು ಮಾಡಲು ನಿರಂತರವಾಗಿ ಶ್ರಮಿಸಲಾಗುತ್ತದೆ.

## ಸಂಚಾರಿ ಕಾನೂನು ಸಾಕ್ಷರತಾ ರಥ :

ನಮ್ಮ ನಾಡಿನಲ್ಲಿ ಹಲವು ಜನರಿಗೆ ಕಾನೂನಿನ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕೆಂಬ ತವಕವಿದ್ದರೂ ಸಹ ತಮ್ಮ ಜೀವನಾಧಾರವಾದ ಹಣ ಗಳಿಸುವುದಕ್ಕಾಗಿ ಬಿಡುವಿಲ್ಲದೆ ದುಡಿಯಬೇಕಿದ್ದು, ಕಾನೂನು ಬಗ್ಗೆ ಮಾಹಿತಿ ಪಡೆಯಲು ಅದಕ್ಕಾಗಿ ಇರುವ ಕೇಂದ್ರಗಳಿಗೆ ಭೇಟಿ ನೀಡಲು ಅಶಕ್ತರಾಗಿರುತ್ತಾರೆ. ಇಂತಹ ಜನರನ್ನು ಗಮನದಲ್ಲಿರಿಸಿಕೊಂಡು ರಾಜ್ಯ ಪ್ರಾಧಿಕಾರದ ಕಾನೂನು ಸಾಕ್ಷರತಾ ರಥಗಳ (ಬಸ್)ಮೂಲಕ ಅವರುಗಳಿಗೆ ಕಾನೂನಿನ ಬಗ್ಗೆ ಮಾಹಿತಿ ನೀಡಲು ಕ್ರಮಕೈಗೊಳ್ಳಲಾಗುವುದು. ಈ ಕುರಿತು ಜಿಲ್ಲಾ ಪ್ರಾಧಿಕಾರದಿಂದ ಎಲ್ಲಾ ತಾಲೂಕು ಸಮಿತಿಗಳ ಮೂಲಕ ಹಳ್ಳಿ ಹಳ್ಳಿಗೆ ಸಂಚರಿಸುವ ಮೂಲಕ ಸ್ಥಳೀಯ ನ್ಯಾಯಾಧೀಶರು, ವಕೀಲರು ಹಾಗೂ ಇತರರು ಕಾನೂನು ಪ್ರಸಾರದ ಮೂಲಕ ಕಾಲಕಾಲಕ್ಕೆ ಸಾಕ್ಷರತಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಸಾಮಾನ್ಯರು ಕಾನೂನು ಸಾಕ್ಷರರನ್ನಾಗಿ ಮಾಡುವಲ್ಲಿ ಯಶಸ್ಸನ್ನು ಸಾಧಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ :

ತಾಲೂಕು ಕಾನೂನು ಸೇವೆಗಳ ಸಮಿತಿ ಬಂಟ್ವಾಳ
ನ್ಯಾಯಾಲಯಗಳ ಸಂಕೀರ್ಣ, ಬಂಟ್ವಾಳ - 574 219

ಮಾನ್ಯ ಅಧ್ಯಕ್ಷರ ಆದೇಶದನುಸಾರ

ಸದಸ್ಯ ಕಾರ್ಯದರ್ಶಿಯವರು
ತಾಲೂಕು ಕಾನೂನು ಸೇವೆಗಳ ಸಮಿತಿ,
ಬಂಟ್ವಾಳ